

# ಆಗುವೆ ನಾನು ಡಾಕ್ಟರ್

■ ಕೆ.ಎಲ್. ಶ್ರೀವತ್ಸ
ಕಲೆ: ಸಂತೋಷ್ ಸಸಿಹಿತ್ಲು

ಪಾಠ ಹೇಳ್ಕೊಡಿ ಟೀಚರ್
ನಾನ್ ಆಗ್ಬೇಕ್ ಮುಂದೆ ಡಾಕ್ಟರ್
ಹಾರ್ಟ್ ಬೀಟ್ ನೋಡಿ ನಾಡಿಯ ಹಿಡಿದು
ಮಾಡುವೆ ಬಾಡಿಯ ಸೂಪರ್

ರೋಗಗಳೆಲ್ಲ ಹೋಗೋ ಹಾಗೆ
ಕೊಡ್ತೀನ್ ನಾನು ಟ್ರೀಟ್ಮೆಂಟ್
ಹೊಸ ಹೊಸ ವೈರಸ್ ಏನೇ ಬರ್ಲಿ
ಮಾಡ್ತೀನಿ ಔಷಧಿ ಇನ್ವೆಂಟ್

ಬಡವರು ಬಂದ್ರೆ ಫ್ರೀ ಮೆಡಿಸನ್ನು
ಹಣ್ಣು ಹಂಪ್ಲು ಮುಫತ್ತ್
ತಾಯಿ ಮಕ್ಕಳ ಕರ್ಕೊಂಡ್ ಬಂದ್ರೆ
ಮಾತ್ರೆ ಬೆಣ್ಣೆ ಬಿಸ್ಕತ್

ಹಾಕುವೆ ನಾನು ಬೆಳ್ಳನೆ ಕೋಟು
ಸ್ಟೆತಾಸ್ಕೋಪು ಕಿವಿಗೆ
ದುಡ್ಡಿಗೆ ಕಾಯದೆ ಟ್ಯಾಬ್ಲೆಟ್ ಕೊಡುವೆ
ಹೆಲ್ತಿ ಆಗೋವರೆಗೆ

ಬೇಸಿಗೆ ರಜದ ಡಾಕ್ಟರ್ ಆಟ
ಮುಗಿದೇ ಹೋಗಿತ್ತಂದು
ಮಕ್ಕಳ ಕೂಗುತ ನಿಂತಿತ್ತಲ್ಲಿ
ಸ್ಕೂಲಿನ ವ್ಯಾನು ಬಂದು





**ಶ್ರೀಗೌರಿ ನಾಡಿಗ್**
5ನೇ ತರಗತಿ, ವಿಕಾಸ ಶಾಲೆ, ಆಲ್ಕೊಳ, ಶಿವಮೊಗ್ಗ



**ನಿನಾದ್ ಕಾರಂತ್**
5ನೇ ತರಗತಿ, ಜೆ.ಜೆ.ಆರ್.ವಿ.ಕೆ. ಬೆಂಗಳೂರು

